


ಟ್ರಿನಿಟಿ ನದಿ ದಡಗಳಲ್ಲಿ ಹರಡಿರುವ ಫೋರ್ಟ್ ವರ್ತ್ ನಗರ

ಶೈಲಿ ಕೂಡ ಭಿನ್ನವಾಗಿ ಕಂಡಿತು. ಹಿಂದಿನ ಕಾಲದ ಹಟ್ಟಿಯನ್ನು ನವೀಕರಿಸಿ ಮಾಡಿದ ಹೋಟೆಲ್ ಅದು! ಅಷ್ಟು ಸಣ್ಣ ಜಾಗದಲ್ಲಿ ಹೆಚ್ಚು ಮಂದಿಗೆ ಊಟ ನೀಡುವಂತೆ ಪೀಠೋಪಕರಣಗಳ ವಿನ್ಯಾಸ ಮಾಡಿದುದನ್ನು ನೋಡಿಯೇ ನನಗೆ ಅತ್ಯಾಶ್ಚರ್ಯ. ಎಲ್ಲಾ ಮೂಲಸೌಕರ್ಯಗಳೂ ಅಲ್ಲಿವೆ; ಶಿಸ್ತು ಶುಚಿತ್ವಗಳ ಪರಿಪಾಲನೆಯೂ.

ಈ ನಗರದ ವೈಶಿಷ್ಟ್ಯವಿರುವುದೇ ಅದರ ಚರಿತ್ರೆ, ಇತಿಹಾಸದಲ್ಲಿ. ಇದರ ಚರಿತ್ರೆಯು 19ನೇ ಶತಮಾನದ ಮಧ್ಯ ಭಾಗದಿಂದ ಆರಂಭವಾಗುತ್ತದೆ. 1849ರಲ್ಲಿ ಅಮೆರಿಕ ಸೇನೆಯ ತುಕಡಿಯೊಂದು ಟ್ರಿನಿಟಿ ನದಿಯ ದಡದ ಈ ಪ್ರದೇಶದಲ್ಲಿ ಕೋಟೆಯೊಂದನ್ನು ಸ್ಥಾಪಿಸಿ ನೆಲೆಯೂರಿತು. ಇದು ವಲಸಿಗರನ್ನು ಇಲ್ಲಿನ ಮೂಲನಿವಾಸಿಗಳ (ರೆಡ್‌ಇಂಡಿಯನ್ನರ) ಆಕ್ರಮಣದಿಂದ ಕಾಪಾಡಲು ಟೆಕ್ಸಾಸಿನಲ್ಲಿ ಸ್ಥಾಪಿಸಲಾದ ಎಂಟು ಕೋಟೆಗಳಲ್ಲಿ ಒಂದಾಗಿತ್ತು. ಮುಂದೆ ಕೆಲವು ವರ್ಷಗಳ ಕಾಲ ಇದೊಂದು ಮಿಲಿಟರಿ ಕ್ಯಾಂಪ್ ಮಾತ್ರ ಆಗಿತ್ತು.

## ಜಾನುವಾರುಗಳೇ ಜೀವನಾಡಿ

ಆಗ ಕೌಬಾಯ್‌ಗಳ ಮತ್ತು ದರೋಡೆಕೋರರ ಕಾದಾಟ, ಹುಚ್ಚಾಟಗಳಿಗೆ ಸಾಕ್ಷಿಯಾಗಿದ್ದು, ಬಲವಿದ್ದವರು ಮಾತ್ರ ಬದುಕುವ ಪ್ರದೇಶವಾಗಿ ಹೆಸರಾಗಿತ್ತು ಫೋರ್ಟ್ ವರ್ತ್. ಕೆಲವು ಕಡೆ ಮಾತ್ರ ಕುರುಚಲು ಕಾಡುಗಳು, ಸಣ್ಣ ಗುಡ್ಡ ಕಣಿವೆಗಳು, ಚಿಕ್ಕ ಜಲಾಶಯಗಳು ಊರಿಂದೂರಿಗೆ ಪ್ರಯಾಣ ಮಾಡುವವರಿಗೆ ಆಸರೆಯಾಗಿರುತ್ತಿದ್ದುವು. ಜಾನುವಾರುಗಳೇ ದೇಶದ ಸಂಪತ್ತಾಗಿದ್ದ ಆ ಕಾಲದಲ್ಲಿ ಹಸುಗಳ ಸಾಗಾಣಿಕೆ ಸಾಮಾನ್ಯ ದೃಶ್ಯವಾಗಿತ್ತು. ದೂರದ ಊರಿಂದ ಹಸುಗಳ ಹಿಂಡುಗಳನ್ನು ಸಾಗಿಸಿಕೊಂಡು ಬರುವವರ ಪ್ರಯಾಣ ಭಯಾನಕವಾಗಿತ್ತು. ಮೈಲಿಗಟ್ಟಲೆ ನೀರಿಲ್ಲದೆ ಪರಿತಪಿಸಬೇಕಿತ್ತು. ಕಷ್ಟಪಟ್ಟು ಪ್ರಯಾಣ ಮಾಡುವಾಗ ಹಠಾತ್ತಾಗಿ ಹಸುಗಳ್ಳರ ಆಕ್ರಮಣಕ್ಕೆ ಬಲಿಯಾಗುತ್ತಿದ್ದುದೂ ಉಂಟು. ಆಗ ಕೆಲಸಕ್ಕೆ ಬರುತ್ತಿದ್ದುದು ಅವರ ಪಿಸ್ತೂಲುಗಳು. ಇಷ್ಟೆಲ್ಲ ಸವಾಲುಗಳಿದ್ದರೂ, 1866ರಿಂದ 1890ರ ಮಧ್ಯೆ, ಸಾವಿರಾರು ಸಾಹಸಿ ಕೌಬಾಯ್ ಕುದುರೆ ಸವಾರರು, ಅಸಂಖ್ಯಾತ ಜಾನುವಾರುಗಳನ್ನು ಸಾಗಿಸಿಕೊಂಡು ಇಲ್ಲಿಗೆ ಬಂದಿಳಿದರು.

ಹೀಗೆ ಬಂದಿಳಿದ ಜನರು ಹೈನುಗಾರಿಕೆಯನ್ನೇ ಉದ್ಯಮವಾಗಿ ಬೆಳೆಸಿಕೊಂಡರು. ಅಷ್ಟು ಮಾತ್ರವಲ್ಲ, ಹೈನುಗಾರಿಕೆಗೆ ಈ ಪ್ರದೇಶ ಪ್ರಸಿದ್ಧಿ ಪಡೆಯಿತು ಕೂಡ. ಇದೊಂದು ಪಟ್ಟಣವಾಗಿ ಬೆಳೆಯಿತು; ಪಟ್ಟಣದ ಹೆಸರೇ 'ಕೌಟೌನ್' ಎಂದು ಬದಲಾಯಿತು. ಟೆಕ್ಸಾಸಿನ ವಿಶಿಷ್ಟ ಉದ್ದ ಕೋಡಿನ ಹಸುಗಳ ಮಾರಾಟ ಕೇಂದ್ರವಾಗಿ ಫೋರ್ಟ್ ವರ್ತ್ ಎಲ್ಲರ ಗಮನ ಸೆಳೆಯಿತು. ಹಸುಗಳು ದಷ್ಟಪುಷ್ಟವಾಗಿದ್ದು, ಅವುಗಳ ಕೋಡುಗಳು ಐದರಿಂದ ಏಳು ಅಡಿಗಳಷ್ಟು ಉದ್ದವಿರುತ್ತಿದ್ದವು. 1876ರಲ್ಲಿ, ಇಲ್ಲಿ 'ಟೆಕ್ಸಾಸ್ ಅಂಡ್ ಪೆಸಿಫಿಕ್ ರೈಲ್ವೆ' ಬಂದುದರಿಂದ ರೈಲು ಸಂಚಾರ ಆರಂಭವಾಯಿತು. ಅದರಿಂದಾಗಿ ನಗರ ಒಂದು ಸಾಗಾಣಿಕಾ ಕೇಂದ್ರವೂ ಆಯಿತು. ಕ್ರಮೇಣ ಇಲ್ಲಿನ ಸ್ಥಿತಿಗತಿ ಬದಲಾಯಿತು. ರೈಲು ಸಂಚಾರ ಆರಂಭವಾದ ಮೇಲೆ ಇಲ್ಲೊಂದು 'ಯೂನಿಯನ್ ಸ್ಟಾಕ್‌ಯಾರ್ಡ್' ತಲೆಯೆತ್ತಿತು.

ಬಾಸ್ಟನ್‌ನಲ್ಲಿದ್ದ 'ಸಿಂಪ್ಸನ್' ಎಂಬ ಬಂಡವಾಳಶಾಹಿ ಸುಮಾರು ಒಂದೂವರೆ ಲಕ್ಷ ಡಾಲರುಗಳಷ್ಟು ಬಂಡವಾಳ ಹಾಕಿ ಈ ಸ್ಟಾಕ್‌ಯಾರ್ಡ್ ಖರೀದಿಸಿ ಅದರ ಹೆಸರನ್ನು 'ಫೋರ್ಟ್ ವರ್ತ್ ಸ್ಟಾಕ್‌ಯಾರ್ಡ್ ಕಂಪನಿ' ಎಂದು ಬದಲಾಯಿಸಿದ. ಇದು ಏಪ್ರಿಲ್ 27, 1893ರಲ್ಲಿ. ಅವನು ತನ್ನ ಜತೆ ಸಮಾನ ಅಭಿರುಚಿಯುಳ್ಳ ಇತರ ಉದ್ಯಮಿಗಳನ್ನು ಸೇರಿಸಿಕೊಂಡು ಜಾನುವಾರುಗಳ ವ್ಯಾಪಾರದೊಂದಿಗೆ ಅವುಗಳ ಮಾಂಸವನ್ನು ಪರಿಷ್ಕರಿಸಿ ಪ್ಯಾಕ್ ಮಾಡಿ ಶೇಖರಿಸಿಡುವ ಕಾರ್ಖಾನೆಗಳನ್ನು ತೆರೆದ. 1900ನೇ ಇಸವಿಯೊಳಗೆ ಇದೆಲ್ಲ ಸಾಧ್ಯವಾಯಿತು.

## ಫೋರ್ಟ್ ವರ್ತ್‌ನ ಪರ್ವ

1924ರಲ್ಲಿ ಹತ್ತಿರದ ನವಾರ್ಸ್ ಎಂಬಲ್ಲಿ ತೈಲ ಪತ್ತೆಯಾಯಿತು. ಆಶ್ಚರ್ಯವೆಂದರೆ ಭೂಮಿಯನ್ನು ಅಗೆದಾಗ ಕಚ್ಚಾ ತೈಲ ಹೊಳೆಯಂತೆ ಹರಿದುಬಂತಂತೆ! 33 ಮಿಲಿಯನ್ ಬ್ಯಾರಲುಗಳಷ್ಟು ತೈಲ ಒಂದೇ ದಿನದಲ್ಲಿ ಉತ್ಪಾದನೆಯಾಯಿತಂತೆ. ಇದರೊಂದಿಗೆ ಫೋರ್ಟ್ ವರ್ತ್ ನಗರದ ಪರ್ವ ಕಾಲ ಶುರುವಾಯಿತು. ಇಲ್ಲಿಂದ ಅಮೆರಿಕದ ಇತರ ಪ್ರಮುಖ ನಗರಗಳಿಗೆ ಸಾರಿಗೆ ಸಂಪರ್ಕ ಕಲ್ಪಿಸುವ ಹೆದ್ದಾರಿಗಳನ್ನು ನಿರ್ಮಿಸಲಾಯಿತು.

20ನೇ ಶತಮಾನದ ಪೂರ್ವಾರ್ಧದಲ್ಲಿ ಹಲವಾರು ಸಾಂಸ್ಕೃತಿಕ ಕೇಂದ್ರಗಳನ್ನು ಸ್ಥಾಪಿಸಲಾಯಿತು. ಒಂದು ವಸ್ತು ಪ್ರದರ್ಶನಾಲಯ ತೆರೆಯಲಾಯಿತು. 1936ರಲ್ಲಿ 'ವಿಲ್ಲ್ ರೋಜರ್ಸ್




ಪ್ರವಾಸಿಗರಿಗೆಂದು ಹಮ್ಮಿಕೊಳ್ಳಲಾಗುವ ಕೌಬಾಯ್‌ಗಳ ಕಾಳಗ